**ಸಿವಿಲ್ ಜಡ್ಜ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಿರುಗುಪ್ಪ**

**ಸಿ.ಸಿ. ನಂ. /786/2024**

ಡಿ.**ಡಬ್ಲ್ಯೂ: 1**

| | | |
|---|---|---|
| ಸಾಕ್ಷಿದಾರನ ಹೆಸರು | : | ಗೌವಿಸಿದ್ದಪ್ಪ |
| ತಂದೆ ಹೆಸರು | : | ಪಂಪಣ್ಣ |
| ವಯಸ್ಸು | : | 47 ವರ್ಷ |
| ಕೆಲಸ | : | ವ್ಯವಸಾಯ ಕೆಲಸ |
| ವಾಸ | : | ಸಿರುಗುಪ್ಪ |

**ಸಾಕ್ಷಿಗೆ ದಿನಾಂಕ: 08.05.2026 ರಂದು ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆ : ಆರೋಪಿ ಪರ ವಕೀಲರು:**

1. ದೂರುದಾರರು ನನಗೆ ಪರಿಚಯ. ಅವರು 01.08.2023 ರಂದು ನನಗೆ 14 ಲಕ್ಷದ ಇಪ್ಪತ್ತೈದು ಸಾವಿರ ಹಣವನ್ನು ಶೇಖಡ 2 ರೂಪಾಯಿಗಳು ಬಡ್ಡಿಯಂತೆ ನೀಡಿದ್ದರು. 02.08.2023 ರಂದು ನಾನು 01 ಖಾಲಿ ಚಕ್ ನ್ನು ದೂರುದಾರರಿಗೆ ನೀಡಿದ್ದೆ. 08.08.202 ರಿಂದ ನವೆಂಬರ್ 2023 ರವರೆಗೆ ನಾನು ದೂರುದಾರರಿಗೆ 10 ಲಕ್ಷದ ಒಂದು ರೂಪಾಯಿಯನ್ನು ವರ್ಗಾವಣೆ ಮಾಡಿದ್ದೆ. ಡಿಸೆಂಬರ್ 2023 ರಲ್ಲಿ ದೂರುದಾರರಿಗೆ 10 ಲಕ್ಷ ರೂಪಾಯಿ ನಗದು ಹಣವನ್ನು ದೂರುದಾರ ಮನೆಗೆ ಹೋಗಿ ಕೊಟ್ಟಿದ್ದೆ. ಆಗ ನಾನು ಚಕ್ ನ್ನು ವಾಪಾಸು ಕೇಳಿದ್ದೆ. ದೂರುದಾರರು ಆಗ ಚಕ್ ಸಿಗುತ್ತಿಲ್ಲ 01 ವಾರ ಬಿಟ್ಟು ಕೊಡುವುದಾಗಿ ತಿಳಿಸಿದರು. ನಂತರ ದೂರುದಾರರು ನೋಟೀಸ್ ಕಳುಹಿಸಿದ್ದು ಅದು ನನಗೆ ಜಾರಿಯಾಗಿಲ್ಲ. ಈ ಪ್ರಕರಣ ದಾಖಲಾದ ಮೇಲೆ ದೂರುದಾರರಿಗೆ ಹೋಗಿ ಕೇಳಿದಾಗ ಅವರು ಹೆಚ್ಚಿನ ಬಡ್ಡಿಗೆ ಕೇಸ್ ಹಾಕಿರುವುದಾಗಿ ಹೇಳಿದರು. ಜನವರಿ 2024 ರಿಂದ ಎಪ್ರೀಲ್ 2024 ರಲ್ಲಿ ನಾನು

ದೂರುದಾರರಿಗೆ 2 ಲಕ್ಷ ಹಣ ಕೊಟ್ಟಿದ್ದೇನೆ. ಇದರ ಬಗ್ಗೆ ಬ್ಯಾಂಕ್ ಖಾತೆ ವಿವರ ದಾಖಲೆ ಇರುತ್ತದೆ. ನಾನು ದೂರುದಾರರಿಗೆ 22 ಲಕ್ಷ ಹಣ ಕೊಟ್ಟಿರುತ್ತೇನೆ. ಈ ಪ್ರಕರಣದಿಂದ ಬಿಡುಗಡೆ ಮಾಡಲು ಕೊರುತ್ತೇನೆ. ಸಾಕ್ಷಿ 10 ಪುಟಗಳ ಎಚ್.ಡಿ.ಎಫ್.ಸಿ. ಬ್ಯಾಂಕಿನ ಖಾತೆ ವಿವರ ಹಾಜರು ಪಡಿಸಿರುತ್ತಾರೆ. ಅದನ್ನು ನಿ. ಡಿ.1 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಮುಂದೂಡಲಾಗಿದೆ.**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೆ. ಸರಿ ಇದೆ.

**ಸಿವಿಲ್ ಮತ್ತು ಜೆ.ಎಂ.ಎಫ್.ಸಿ.**
**ನ್ಯಾಯಾಧೀಶರು, ಸಿರುಗುಪ್ಪ .**